O.S.287/2014
ಪಿ ಡಬ್ಲ್ಯೂ-2

**ಸಾಕ್ಷಿಯನ್ನು ದಿನಾಂಕ 17-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ GMK ವಕೀಲರಿಂದಃ**

1. ನಾನು 2009 ನೇ ಸಾಲಿನಿಂದ ಬಿಕ್ಲಂದಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಬಿಕ್ಲಂದಾರರ ಕರ್ತವ್ಯ ಮತ್ತು ನಿಯಮಗಳ ಬಗ್ಗೆ ನನಗೆ ಚೆನ್ನಾಗಿ ಗೊತ್ತು. ಯಾವುದೇ ಒಂದು ಪತ್ರವನ್ನು ಬರೆದಾಗ ಬಿಕ್ಲಂದಾರರು ಆ ಪತ್ರದ ಬಗ್ಗೆ ಪುಸ್ತಕದಲ್ಲಿ ನಮೂದು ಮಾಡಿಕೊಳ್ಳತಕ್ಕದ್ದು ಎಂದರೆ ಆ ರೀತಿ ಮೊದಲು ಇರಲಿಲ್ಲ, 2017-18 ನೇ ಸಾಲಿನಿಂದ ನಮೂದು ಮಾಡಿಕೊಳ್ಳಬೇಕಾಗುತ್ತದೆ. 2017-18 ಕ್ಕಿಂತ ಮೊದಲು ಪತ್ರ ವ್ಯವಹಾರದಲ್ಲಿ ಬರೆದ ಬಗ್ಗೆ ನಮೂದು ಮಾಡಿಕೊಳ್ಳಬೇಕಾಗಿತ್ತು , ಆದರೆ ನಾನು 2017-18 ನೇ ಸಾಲಿನಿಂದ ಪತ್ರಗಳ ಬರೆದ ಬಗ್ಗೆ ಪುಸ್ತಕದಲ್ಲಿ ನಮೂದ ಮಾಡಿಕೊಳ್ಳುತ್ತಿರುತ್ತೇನೆಂದರೆ ಸರಿ. ಮನೆ ಮತ್ತು ನಿವೇಶನಕ್ಕೆ ಸಂಬಂಧಿಸಿದಂತೆ ಪತ್ರವನ್ನು ಬರೆಯುವಾಗ ಸದರಿ ಆಸ್ತಿಗೆ ಸಂಬಂಧಿಸಿದ ಖಾತಾ ನಮೂನೆ ಬೇಕಾಗುತ್ತದೆ. ಆ ರೀತಿ ಖಾತಾ ಪತ್ರ ಇದ್ದಾಗ ಪತ್ರಗಳಲ್ಲಿ ನೊಂದಾವಣಿ ಮಾಡಿಸಬಹುದು ಎಂದರೆ ಸರಿ. ನಾನು ಕೊರಟಗೆರೆಯ ನೊಂದಾವಣಿ ಕಛೇರಿಯಲ್ಲಿ ಹೆಚ್ಚು ಪತ್ರಗಳನ್ನು ನೊಂದಾವಣಿ ಮಾಡಿಸಿರುತ್ತೇನೆಂದರೆ ಸರಿ.

2. ಇತ್ತೀಚೆಗೆ ನನ್ನ ಮೇಲೆ ಪೊಲೀಸ್ ಕೇಸ್ ಆಗಿತ್ತು ಎಂದರೆ ಸರಿ. ನನ್ನ ಕರ್ತವ್ಯದಲ್ಲಿ ಲೋಪ ಮಾಡಿರುತ್ತೇನೆಂದು ನನ್ನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ದಿಃ 13.08.2012 ರಂದು ವಾದಿಗೆ ಹಣಕಾಸಿನ ಕೊರತೆ ಇರಲಿಲ್ಲ ಎಂದರೆ ಸರಿ. ದಿಃ 13.08.2012 ರಿಂದ ನನಗೆ ವಾದಿಯ ಪರಿಚಯ ಇರುತ್ತದೆ. ಅದಕ್ಕೂ ಮೊದಲು ನಾನು ವಾದಿಗೆ ಸಂಬಂಧಿಸಿದ 2-3 ಪತ್ರಗಳನ್ನು ನೊಂದಾವಣಿ ಮಾಡಿಸಿರುತ್ತೇನೆ. ವಾದಿ ಆರ್ಥಿಕವಾಗಿ ಚೆನ್ನಾಗಿದ್ದು ಹಣಕಾಸಿನ ವ್ಯವಹಾರ ಮಾಡುತ್ತಾರೆಂದರೆ ಸರಿ. ವಾದಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದ ದಾಖಲೆಗಳನ್ನು ನನ್ನ ಬಳಿ ಮಾಡಿಸುತ್ತಾರೆಂದರೆ ಸರಿ. ಪತ್ರವನ್ನು ಬರೆಸಲು ಪ್ರತಿವಾದಿಗಳು ನನ್ನ ಬಳಿ ಬಂದ ಕಾರಣ ಅವರ ಪರಿಚಯ ಇರುತ್ತದೆ. ಪ್ರತಿವಾದಿಗಳನ್ನು ನನಗೆ ಸಾಕ್ಷಿದಾರರು ಪರಿಚಯ ಮಾಡಿಸಿರುತ್ತಾರೆ. ಆ ಸಮಯದಲ್ಲಿ

ವಾದಿ, ಸಾಕ್ಷಿದಾರರು ಇದ್ದರು. ನನ್ನ ಸಮಕ್ಷಮ ವಾದಿ ಮತ್ತು ಪ್ರತಿವಾದಿಗಳು ವ್ಯವಹಾರದ ಬಗ್ಗೆ ಮಾತನಾಡಿಕೊಂಡಿರಲಿಲ್ಲ, ಅದಕ್ಕೂ ಮೊದಲು ಮಾತನಾಡಿಕೊಂಡಿರುತ್ತಾರೆ. ಪ್ರತಿವಾದಿಗಳ ಬಳಿ ನಾನು ಖಾತಾ ನಮೂನೆಗಳನ್ನು ಕೇಳಿದ್ದು, ಅವರು ನನಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಖಾತಾ ನಮೂನೆಗಳು 1 ನೇ ಪ್ರತಿವಾದಿ ಹೆಸರಿನಲ್ಲಿದ್ದವು.

3. ದಿಃ13.08.2012 ರಂದು ನಾನು ನಿಪಿ-1 ರ ಜೊತೆ ಬೇರೆ ಪತ್ರಗಳನ್ನು ನೊಂದಾವಣಿ ಮಾಡಿಸಿರುತ್ತೇನೋ ಇಲ್ಲವೋ ಎಂಬುದರ ಬಗ್ಗೆ ನನಗೆ ನೆನಪಿಲ್ಲ. ನಿಪಿ-1 ರ ಕರಡು ಪ್ರತಿಯನ್ನು ನಾನು ತಯಾರು ಮಾಡಿರುತ್ತೇನೆ. ನಿಪಿ-1(f)ನ ಸಹಿ ದೌಲತ್ ಉಸೇನ್ ರವರ ಸಹಿ ಆಗಿರುತ್ತದೆ. ನಿಪಿ-1(f)ನ್ನು ಕಾಣಿಸುವ ರೀತಿಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸಹಿ ಮಾಡಿದಾಗ ಸದರಿ ಸಹಿಯ ಕೆಳಗೆ ಸಾಕ್ಷಿದಾರರ ಪೂರ್ತಿ ಹೆಸರು ಮತ್ತು ವಿಳಾಸ ಬರೆಯುವ ಕರ್ತವ್ಯ ಬಿಕ್ಲಂದಾರರದ್ದಾಗಿರುತ್ತದೆ ಎಂದರೆ ಸರಿ. ನಿಪಿ-1(f)ನ ಸಹಿಯ ಕೆಳಗೆ ನಾನು ಸದರಿ ಸಾಕ್ಷಿದಾರರ ಹೆಸರು ಮತ್ತು ವಿಳಾಸವನ್ನು ಬರೆಯಬೇಕಾಗಿತ್ತು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ-1 ನ್ನು ನೋಡಿಕೊಂಡು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನೀಡಿರುತ್ತೇನೆಂದರೆ ಸರಿ. ಜಾಫರ್ ಆಲಿ ಬೇಗ್ ಮತ್ತು ದೌಲತ್ ಉನ್ನೀಸಾ ರವರು ಖುದ್ದು ಹಾಜರಿದ್ದು ಕ್ರಯದ ಕರಾರುಪತ್ರಕ್ಕೆ ಸಾಕ್ಷಿಗಳಾಗಿ ಸಹಿಗಳನ್ನು ಮಾಡಿರುತ್ತಾರೆಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿ. ದೃಲತ್ ಉನ್ನೀಸಾರವರು ನಿಪಿ-1 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದರೆ ಸರಿ. ನಿಪಿ-1 ನ್ನು ನಾನೇ DTP ಮಾಡಿರುತ್ತೇನೆ. ಪತ್ರ ಬರೆದ ನಂತರ ಪತ್ರ ಬರೆದುಕೊಡುವವರು ಹಾಗೂ ಬರೆಸಿಕೊಂಡವರು ಮತ್ತು ಸಾಕ್ಷಿದಾರರ ಸಹಿಗಳನ್ನು ಪತ್ರಕ್ಕೆ ನಾನೇ ಮಾಡಿಸುತ್ತೇನೆಂದರೆ ಸರಿ.

4. ವಾದಿ ಹಣಕಾಸಿನ ವ್ಯವಹಾರ ಮಾಡುವಾಗ ಬಡ್ಡಿಗಾಗಿ ಹಣವನ್ನು ನೀಡುತ್ತಾರೆಂದರೆ ಸರಿಯಲ್ಲ. ಆ ರೀತಿ ಬಡ್ಡಿಗಾಗಿ ಹಣವನ್ನು ನೀಡಿದಾಗ ಸಾಲ

ಪಡೆದುಕೊಂಡವರ ಬಳಿ ಅವರಿಗೆ ಗೊತ್ತಿಲ್ಲದ ಹಾಗೆ ದಾಖಲೆಗಳಿಗೆ ಸಹಿ ಪಡೆದುಕೊಂಡು ನಿಪಿ-1 ರಂತಹ ಕರಾರು ಪತ್ರಗಳನ್ನು ನನ್ನ ಬಳಿ ಮಾಡಿಸುತ್ತಾರೆಂದರೆ ಸರಿಯಲ್ಲ. ನಾನು ವಾದಿಗೆ ಸಂಬಂಧಿಸಿದ ಹಲವಾರು ಕರಾರು ಪತ್ರ ಮತ್ತು ರದ್ದಿಯಾತಿ ಪತ್ರಗಳನ್ನು ಮಾಡಿರುತ್ತೇನೆಂದರೆ ಸರಿಯಲ್ಲ. 2012 ಆಗಸ್ಟ್ ತಿಂಗಳಲ್ಲಿ ಪ್ರತಿವಾದಿಗಳಿಗೆ ಹಣಕಾಸಿನ ಅವಶ್ಯಕತೆ ಇದ್ದ ಕಾರಣ ಅವರು ನನ್ನ ಬಳಿ ಬಂದು ಹಣದ ಭದ್ರತೆಗೆ ದಾಖಲೆ ಮಾಡಿಕೊಡುವಂತೆ ನನ್ನನ್ನು ಕೇಳಿರುತ್ತಾರೆಂದರೆ, ಸ್ವತ್ತನ್ನು ಮಾರಾಟ ಮಾಡುವ ಸಲುವಾಗಿ 1 ಲಕ್ಷ 50 ಸಾವಿರ ಹಣವನ್ನು ಪಡೆದಿರುತ್ತಾರೆ. ಪ್ರತಿವಾದಿಗಳು ಕ್ರಯದ ಕರಾರು ಪತ್ರವನ್ನು ಬರೆದುಕೊಡುವಂತೆ ನನ್ನನ್ನು ಕೇಳಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ವಾದಿ ಮತ್ತು ಪ್ರತಿವಾದಿಗಳ ನಡುವೆ ಸಾಲದ ಹಣಕ್ಕೆ ಶೇಕಡ 2 ರಷ್ಟು ಬಡ್ಡಿ ನೀಡುವಂತೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ.

5. ಹೊಳವನಹಳ್ಳಿ ಹೋಬಳಿ ಕೇಂದ್ರ ಎಂದರೆ ಸರಿ. ಹೊಳವನಹಳ್ಳಿಯಲ್ಲಿ ಆಸ್ತಿ ಬೆಲೆ ಜಾಸ್ತಿ ಇದೆ ಎಂದರೆ ಸರಿ. 2012 ನೇ ಸಾಲಿನಲ್ಲಿ ದಾವಾ ಆಸ್ತಿಯ ಬೆಲೆ 10 ರಿಂದ 12 ಲಕ್ಷ ಬಾಳುತ್ತಿತ್ತು ಎಂದರೆ ಸರಿಯಲ್ಲ. 2012 ನೇ ಸಾಲಿನಲ್ಲಿ ದಾವಾ ಆಸ್ತಿಯ ಬೆಲೆಯು ನಿಪಿ-1 ರಲ್ಲಿ ಕಾಣಿಸಿರುವಷ್ಟು ಬೆಲೆ ಆಗಿರುತ್ತದೆ. ಪ್ರತಿವಾದಿಗಳು ಮುಸ್ಲಿಂ ಜನಾಂಗದವರಾಗಿದ್ದು ಅವರು ಉರ್ದು ಭಾಷೆ ಮಾತನಾಡುತ್ತಿದ್ದರು ಎಂದರೆ ಸರಿ. ನಿಪಿ-1 ನ್ನು ಬರೆಯಲು ನನಗೆ 1 ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ಪ್ರತಿವಾದಿಗಳಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ, ಕನ್ನಡ ಭಾಷೆಯಲ್ಲಿ 1 ನೇ ಪ್ರತಿವಾದಿ ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ಪತ್ರವನ್ನು ಬರೆದುಕೊಳ್ಳುವಂತೆ ನನ್ನನ್ನು ಕೇಳಿದ್ದು, ಪ್ರತಿವಾದಿಗಳಿಗೆ ಕನ್ನಡ ಭಾಷೆ ಬಾರದೇ ಇರುವ ಕಾರಣ ನಾನು ಮತ್ತು ವಾದಿ ಸೇರಿಕೊಂಡು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಆ ರೀತಿ ಪತ್ರವನ್ನು ಸೃಷ್ಟಿ ಮಾಡಿ ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಪ್ರತಿವಾದಿಗಳಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ-1ರ ದಿನಾಂಕದಂದೇ ಕ್ರಯಪತ್ರವನ್ನು ನೊಂದಾವಣಿ ಮಾಡಿಸಲು ಉಭಯ ಪಕ್ಷಗಾರರಿಗೂ ತೊಂದರೆ ಇತ್ತು. ಆ ರೀತಿ ವಾದಿ ಮತ್ತು ಪ್ರತಿವಾದಿಗಳಿಗೆ ಕ್ರಯ ಪತ್ರ ನೊಂದಾವಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಿನಾಂಕದಂದೇ ಪ್ರತಿವಾದಿ ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ನಾನು ನೊಂದಾಯಿತ ಕ್ರಯಪತ್ರವನ್ನು ಬರೆಸಿಕೊಳ್ಳಬಹುದಿತ್ತು ಎಂದರೆ ಸರಿಯಲ್ಲ, ಕಂದಾಯ ರಸೀದಿಗಳ ಅವಶ್ಯಕತೆ ಇತ್ತು. ಪತ್ರವನ್ನು ನೊಂದಾವಣಿ ಮಾಡಿಸಲು ಕಂದಾಯ ರಸೀದಿಗಳ ಅವಶ್ಯಕತೆ ಇರುವುದಿಲ್ಲ ಎಂದರೆ, ಕ್ರಯದಾರರಿಗೆ ಕಂದಾಯ ರಸೀದಿಗಳನ್ನು ನೀಡಬೇಕಾಗುತ್ತದೆ. ಪ್ರತಿವಾದಿಗಳು ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಹೊಂದಿದ್ದರು ನೊಂದಾಯಿತ ಕ್ರಯಪತ್ರವನ್ನೇ ಬರೆದುಕೊಡುತ್ತಿದ್ದರು, ಆ ರೀತಿ ಅವರಿಗೆ ಅವಶ್ಯಕತೆ ಇಲ್ಲದೇ ಇರುವ ಕಾರಣ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ನಾನು ಮತ್ತು ವಾದಿ ಸೇರಿಕೊಂಡು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.287/2014

ಪಿ ಡಬ್ಲ್ಯೂ-2

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.

*Koratagere.*